ಚರ್ಚೆ ಮಾಡುವುದಕ್ಕೆ ಸಹ ತಲಿಸುವುದಕ್ಕೆ ನಾವು ತಯಾರಾಗಿದ್ದೇವೆ. ಒಂದು ಕೆ.ಜಿ. ಗೂಡಿಗೆ 150 ರೂಪಾಯಿ ನಿಗದಿಪಡಿಸಿ ಮತ್ತು ನಿಮ್ಮ ಫಿಲೇಚರ್ಸ್ ಏನಿವೆ ಅವು ಏನು ಕೆಲಸ ಮಾಡುತ್ತಿವೆ, ಅದನ್ನು ಅವರು ಕೊಂಡುಕೊಳ್ಳುವಂತಹ ವ್ಯವಸ್ಥೆ ಮಾಡಿ. ಆ ಗೂಡನ್ನಾದರೂ ಕೊಂಡುಕೊಂಡು ರೇಷ್ಮೆ ಮಾರುಕಟ್ಟೆಗೆ ಬರುವಂತಹ ವ್ಯವಸ್ಥೆ ಮಾಡಲಿ. ಹಾಗೆ ವ್ಯವಸ್ಥೆ ಮಾಡಿದಂತಹ ಕಾಲದಲ್ಲಿ ಬೆಲೆ ತನ್ನಷ್ಟಕ್ಕೆ ತಾನೇ ಜಾಸ್ತಿಯಾಗುತ್ತದೆ. ಮಾರ್ಕೆಟ್ ಪ್ರವೇಶ ಮಾಡುವಂಥಾದ್ದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿ. ಬೆಲೆ ತನ್ನಷಾಡಿಗೆ ಏರುತ್ತದೆ.

ಅಧ್ಯಕ್ಷರು:- ತಾವ್ಯಾರು ಸಿಗ್ನೇಚರ್ ಮಾಡಿಲ್ಲ. ಎಲ್ಲರೂ ಮಾತನಾಡಿ ನನ್ನದೇನು ಅಭ್ಯಂತರವಿಲ್ಲ.

ಶ್ರೀ ಸಿ. ಬೈರೇಗೌಡ:- ನೀವು ಯಾವುದನ್ನೂ ಕೂಡ ಮಾಡದೇ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಿ ಹೇಳುವಂಥಾದ್ದು, ಈ ರಾಜ್ಯದ ರೇಷ್ಮೆ ಬೆಳಿಗಾರರ ತಲೆ ಮೇಲೆ ಬಂಡೆ ಎಳೆಯುತ್ತಿರುತಕ್ಕಂಥಾದ್ದು. ಮಾನ್ಯ ರಾಮಯ್ಯನವರು ಗುಣಮಟ್ಟದ ಬಗ್ಗೆ ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲೂ ಕೂಡ ಚೈನಾ ದೇಶದಲ್ಲಿ ಯಾವ ಗುಣಮಟ್ಟದ ರೇಷ್ಮೆ ಉತ್ಪಾದನೆಯಾಗುತ್ತಿದೆ ಅದೇ ಗುಣಮಟ್ಟದ ರೇಷ್ಮೆ ಉತ್ಪಾದನೆಯಾಗುತ್ತಿದೆ.

ಶ್ರೀ ವೈ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೆ, ನೀವು ಇದಕ್ಕೆ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ಅವರು ಮುಗಿಸುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- ರೈತರ ಬಗ್ಗೆ ಹೇಳುತ್ತಿದ್ದಾರೆ ಏನು ಇದು....

(ಗೊಂದಲ)

ಅಧ್ಯಕ್ಷರು:- ಇಲ್ಲಿ ಯಾರು ಮಾತನಾಡಿದರೂ ರೆಕಾರ್ಡ್ ಮಾಡಬೇಡಿ.

(ಜನತಾದಳ ಶಾಸಕರುಗಳು ದಿಕ್ಕಾರ ಎಂದು ಕೂಗುತ್ತಾ ಧರಣಿ ಮಾಡಲು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಎರಡು ನಿಮಿಷಗಳು ಮಾತನಾಡುತ್ತಾರೆ, ತಾವೆಲ್ಲರೂ ಸುಮ್ಮನಿರಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಎಲ್ಲರಿಗೂ ರೇಷ್ಮೆ ಬೆಳಿಗಾರರ ಬಗ್ಗೆ ಕಳಕಳಿ ಇದೆ, ಇವತ್ತಿನ ದಿವಸ ಇವರು ಬಹಳ ಸಂಕಷ್ಟದಲ್ಲಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಸಮಯ ಕೊಡಿ, ಅವರು ಎರಡು ನಿಮಿಷಗಳು ಮಾತನಾಡಲಿ, ಮಾನ್ಯ ಮುದ್ದಹನುಮೇಗೌಡರೇ, ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ, ದಯಮಾಡಿ ತಾವು ಕುಳಿತುಕೊಳ್ಳಿ.